

1956ರಲ್ಲಿ ವ್ಯಾಟ್ಸನ್ ಹಾರ್ವರ್ಡ್ ವಿಶ್ವವಿದ್ಯಾಲಯದ ಜೀವಶಾಸ್ತ್ರದ ವಿಭಾಗವನ್ನು ಸೇರಿದರು. ಇಲ್ಲಿಯ ಎಳೆಯ ವಿಜ್ಞಾನಿಗಳನ್ನು, ಪದವಿ ಪಡೆದ ವಿದ್ಯಾರ್ಥಿಗಳನ್ನು ಜೆನೆಟಿಕ್ ರಂಗಕ್ಕೆ ಆಕರ್ಷಿಸುವಲ್ಲಿ ಯಶಸ್ವಿಯಾದರು; ಜೆನೆಟಿಕ್ ಕ್ರಾಂತಿಯ ಭಾಗವಾದರು. 1968ರಲ್ಲಿ ಅವರು ನ್ಯೂಯಾರ್ಕ್‌ನ 'ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಲ್ಯಾಬೊರೇಟರಿ'ಗೆ ಸೇರಿದರು. ಈ ಕೋಲ್ಡ್ ಸ್ಪ್ರಿಂಗ್ ಪ್ರಯೋಗಶಾಲೆಯನ್ನು ವಿಶ್ವಪ್ರಸಿದ್ಧ ಸಂಶೋಧನಾ ಸಂಸ್ಥೆಯಾಗಿ ಬೆಳೆಸಿದರು.

1968ರಲ್ಲಿಯೇ ಅವರು ಎಲಿಜಬೆತ್ ಲೆವಿ ಅವರನ್ನು ವಿವಾಹವಾದರು. ಅವರಿಗೆ ಇಬ್ಬರು ಗಂಡು ಮಕ್ಕಳು. ಎರಡನೇ ಮಗನಲ್ಲಿ 'ಸ್ಕಿಜೊಫ್ರೀನಿಯಾ' ಗುರುತಿಸಿದ ಕಾರಣ, ಬಹುಶಃ ಇಂತಹ ಮಾನಸಿಕ ಕಾಯಿಲೆಗೆ ಕಾರಣವಾದ ವಂಶವಾಹಿಗಳ ಹುಡುಕಾಟ ವ್ಯಾಟ್ಸನ್ ಅವರ ಆಸಕ್ತಿಯ ವಿಷಯವಾಯಿತು.

## ಮತ್ತೆ ವಿವಾದದ ಸುಳಿಯಲ್ಲಿ

ಡಿ.ಎನ್.ಎ.ಯ 'ಜೋಡಿ ಸುರುಳಿ' ರಚನೆಯನ್ನು ಕಂಡುಹಿಡಿದಾಗ ವ್ಯಾಟ್ಸನ್ ಕೇವಲ 25ರ ಯುವಕ, 34ರ ವಯಸ್ಸಿನಲ್ಲಿಯೇ ನೊಬೆಲ್ ಪಾರಿತೋಷಿಕ ಅವರಿಗೆ ಲಭಿಸಿತ್ತು. ಬಹುಶಃ ಅತಿ ಚಿಕ್ಕವಯಸ್ಸಿಗೆ ದೊರೆತ ಪ್ರಸಿದ್ಧಿ ಅವರನ್ನು ಬಡಾಯಿ ಕೊಚ್ಚಿಕೊಳ್ಳುವಂತೆ ಮಾಡಿರಬಹುದು. ಆದರೆ 2007ರಲ್ಲಿ ತಮ್ಮ 79ರ ವಯಸ್ಸಿನಲ್ಲಿ ವ್ಯಾಟ್ಸನ್ 'ಟೈಮ್ಸ್ ಆಫ್ ಲಂಡನ್'ಗೆ 'ಆಫ್ರಿಕನ್ನರ ಬುದ್ಧಿಮಟ್ಟ ನಮ್ಮಷ್ಟು ಇಲ್ಲ' ಎಂಬ ಹೇಳಿಕೆಯನ್ನು ನೀಡಿದರು. ಎಂದೋ ಅಪಖ್ಯಾತಿಗೆ ಒಳಗಾಗಿದ್ದ 'ರೇಸಿಸ್ಟ್' ಜನಾಂಗೀಯವಾದದ ಸಿದ್ಧಾಂತಗಳನ್ನು ಮತ್ತೆ ಪ್ರಚಾರ ಮಾಡಿದ ಆರೋಪದ ಮೇಲೆ ವ್ಯಾಟ್ಸನ್ 'ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಪ್ರಯೋಗಶಾಲೆ'ಯ ಕುಲಪತಿ ಪೀಠದಿಂದ ಬಲವಂತವಾಗಿ ನಿವೃತ್ತರಾಗಬೇಕಾಯಿತು.

ನಂತರ ಅವರು ಕ್ಷಮೆ ಯಾಚಿಸಿದರೂ, ಅವರ ಅಂತರಂಗದ ಪೂರ್ವಗ್ರಹಗಳು ಮಾಸಿದಂತಿರಲಿಲ್ಲ. ಬೇರೆ ಬೇರೆ ಜನಾಂಗಗಳ 'ಐಕ್ಯು' ಬೇರೆ ಬೇರೆಯಾಗಿರಲು ಪರಿಸರದ ಕಾರಣಗಳನ್ನು ವಿಜ್ಞಾನಿಗಳು ಗುರುತಿಸಿದ್ದರೂ, ಮತ್ತೆ 2009ರ ವರದಿ ಚಿತ್ರದಲ್ಲಿ ವ್ಯಾಟ್ಸನ್ ಅದಕ್ಕೆ ಅವರ ವಂಶವಾಹಿಗಳೇ ಕಾರಣ ಎಂದರು. ತಕ್ಷಣವೇ ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಲ್ಯಾಬೊರೇಟರಿ 'ಡಾ. ಜೇಮ್ಸ್ ವ್ಯಾಟ್ಸನ್ ಅವರ ಆಧಾರರಹಿತ ಬೇಜವಾಬ್ದಾರಿ ವೈಯಕ್ತಿಕ ಅಭಿಪ್ರಾಯವನ್ನು ಸಂಸ್ಥೆ ನಿಸ್ಸಂದಿಗ್ಧವಾಗಿ ನಿರಾಕರಿಸುತ್ತದೆ. ವೈಜ್ಞಾನಿಕ ಆಧಾರವಿಲ್ಲದ ಅವರ ಹೇಳಿಕೆಗಳು ಆಕ್ಷೇಪಾರ್ಹ. ಈ ಪ್ರಯೋಗಶಾಲೆ ಪೂರ್ವಗ್ರಹಗಳನ್ನು ಸಮರ್ಥಿಸಿಕೊಳ್ಳಲು ವಿಜ್ಞಾನದ ದುರುಪಯೋಗವನ್ನು ಖಂಡಿಸುತ್ತದೆ' ಎಂದು ಸ್ಪಷ್ಟವಾಗಿ ತಿಳಿಸಿತು.

ಇಂದು 'ಎಪಿಜೆನಿಟಿಕ್ಸ್' ರಂಗದ ಸಂಶೋಧನೆಗಳು 'ಜೆನೆಟಿಕ್' ಅಲ್ಲದ ಅಂಶಗಳು ಜೀವಿಯ ವಂಶವಾಹಿಗಳು ವಿಭಿನ್ನ ರೀತಿಯಲ್ಲಿ ವರ್ತಿಸಲು ಕಾರಣವಾಗುತ್ತವೆ ಎಂದು ತೋರಿಸಿವೆ.



ಮಹಾತ್ಮ ಗಾಂಧಿ ರಸ್ತೆಯ ಬೈಬಲ್ ಸೊಸೈಟಿ ಆಫ್ ಇಂಡಿಯಾದ ಬಳಿ ಇರುವ ಡಬಲ್ ಹೆಲಿಕ್ಸ್ ಸ್ಮಾರಕ ಶಿಲ್ಪ